ನಿಮ್ಮೊಡನೆ

# ಗೆಲುವಿನ ನಗೆಯ ಆತ್ಮಾವಲೋಕನ

**ಭಾರತೀಯ ಮಹಿಳಾ ಕ್ರಿಕೆಟ್ ತಂಡ ವಿಶ್ವಕಪ್ ಗೆದ್ದು, ನೇವರಿಸಿ, ಮಗುವಿನಂತೆ ಮುದ್ದಿಸಿ, ಮುಂದಿನ ದಾರಿಯ ಕಡೆಗೆ ನೋಡುತ್ತಿದೆ. ತಂಡದ ಪ್ರತಿ ಪಟುವಿನ ಹಿಂದೆಯೂ ಒಂದೊಂದು ಕತೆ ಇದೆ. ಗೆಲುವಿನ ನಗೆಯೊಂದಿಗೆ ಕಣ್ಣೀರು ಬಂದಿದ್ದು ಸಂಘರ್ಷ ಮತ್ತು ಸಂತೋಷದ ಪ್ರತೀಕ. ಸಂತೋಷಕ್ಕೆ ಅವರದ್ದೇ ಶ್ರಮ ಕಾರಣವಾದರೆ ಸಂಘರ್ಷಕ್ಕೆ ಸಮಾಜದ ನಡೆಯೇ ಕಾರಣ.**



ವಿಜಯ

‘ಹೆಣ್ಣುಮಕ್ಕಳೇ ಸ್ಟ್ರಾಂಗು ಗುರು’; ‘ಬೇಟಿಯಾ ಗರಿಮಾ ಹೋತಿ ಹೈ’ (ಹೆಣ್ಮಕ್ಕಳು ನಮ್ಮ ಹೆಮ್ಮೆ); ‘ಗರ್ಲ್ಸ್ ಪ್ಲೇಯ್ಡ್ ವೆಲ್’; ಹೀಗೆಲ್ಲ ಹೊಗಳಿಕೆ ಇಂದು ಎಲ್ಲ ಕಡೆಯೂ ಕೇಳಿ ಬರುತ್ತಿದೆ. ಅದಕ್ಕೆ ನಮ್ಮ ಕ್ರಿಕೆಟ್‌ನ ಮಹಿಳಾ ತಂಡ ಭಾಜನರಾಗುತ್ತಿರುವುದು ಸಂತೋಷದ ವಿಷಯ. ಜೊತೆಗೆ ಕ್ರೀಡಾಕ್ಷೇತ್ರದಲ್ಲಿ ಆಗುತ್ತಿರುವ ತರತಮ ನೀತಿಯ ಕುರಿತೂ ಚರ್ಚೆಗಳಾಗುತ್ತಿವೆ.

ಕ್ರೀಡಾಂಗಣದಲ್ಲಿ ನಗೆಯ ಹೊನಲಿನೊಂದಿಗೆ ಕಣ್ಣಪಸೆಯೂ, ಆ ಪಸೆಯಲ್ಲಿ ಗೆಲುವಿನ ಬಿಂಬವೂ ಎದ್ದು ಕಾಣುತ್ತಿತ್ತು. ಎಲ್ಲ ಸಂಘರ್ಷಗಳನ್ನೂ ಮೀರಿ, ಗೆಲುವಿನ ಗೆರೆಗೆ ಬಂದ ತಂಡದವರ ಮನದೊಳಗೆ ತಮ್ಮೆಲ್ಲ ಸಂಘರ್ಷಗಳೂ, ಸಂಕಟಗಳೂ ಎದ್ದು ನಿಂತಿದ್ದವು. ಈ ಗೆಲುವು ಕೇವಲ ಕ್ರಿಕೆಟ್ ತಂಡಕ್ಕೆ ಮಾತ್ರವಲ್ಲ. ಎಲ್ಲ ಅಡೆತಡೆಗಳನ್ನು ಮೀರಿಯೂ ಹೆಣ್ಣುಮಕ್ಕಳ ಕನಸನ್ನು ನನಸಾಗಿಸಿದ ಅಪ್ಪಂದಿರಿಗೂ ಸಲ್ಲುವಂತಾಯಿತು.

ನಮ್ಮ ದೇಶದಲ್ಲಿ ಕ್ರಿಕೆಟ್ ಹೊರತುಪಡಿಸಿದರೆ ಉಳಿದೆಲ್ಲ ಕ್ರೀಡೆಗಳು ಇನ್ನೂ ಮುಖ್ಯವಾಹಿನಿಗೆ ಬಂದಿವೆ ಎಂದೆನಿಸುವುದೇ ಇಲ್ಲ. ಫುಟ್ಬಾಲ್, ಹಾಕಿ, ಅಥ್ಲೆಟಿಕ್ಸ್, ಇವುಗಳಿಗೆಲ್ಲ ಮೂಲಸೌಲಭ್ಯದ ಕೊರತೆ ಒಂದೆಡೆ. ಇನ್ನೊಂದೆಡೆ ಸಮಾಜದ ದೃಷ್ಟಿಕೋನ ಬದಲಾಗದೇ ಇರುವುದೂ ಕಾರಣವಾಗಿದೆ. ದೈಹಿಕ ಶ್ರಮವನ್ನು ಬೇಡುವ ಆಟಗಳನ್ನಾಡಿದರೆ ಹೆಣ್ಣುಮಕ್ಕಳಿಗೆ ಕಷ್ಟ ಆಗುವುದು, ಮುಟ್ಟಿನ ದಿನಗಳನ್ನು ಹೇಗೆ ನಿರ್ವಹಿಸುತ್ತಾರೆ? ಮದುವೆಯಾಗಿ ಹೆರಬೇಕಾದ ವಯಸ್ಸಿನಲ್ಲಿಯೇ ಕ್ರೀಡಾ ಭವಿಷ್ಯ ನಿರೂಪಿಸುವುದರಲ್ಲಿ ನಿರತರಾದರೆ ಹೇಗೆ? ಇಂಥ ಪ್ರಶ್ನೆಗಳ ಹರಿವಿನಲ್ಲಿ ಅದೆಷ್ಟೋ ಪ್ರತಿಭಾವಂತ ಕ್ರೀಡಾಪಟುಗಳು ವಲಯಮಟ್ಟದಲ್ಲಿಯೇ ಕಳೆದುಹೋಗುತ್ತಾರೆ.

ಗುಡ್ಡಗಾಡು ಪ್ರದೇಶದ ಮೇರಿಕೋಮ್, ಕರಣಮ್ ಮಲ್ಲೇಶ್ವರಿ, ಸಾನಿಯಾ ಮಿರ್ಜಾ, ಸೈನಾ ನೆಹ್ವಾಲ್, ಮೀರಾಬಾಯಿ ಛನು ಇವರೆಲ್ಲ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದಾಗ, ಗ್ರ್ಯಾಂಡ್ ಸ್ಲಾಮ್‌ಗಳನ್ನು ಗೆದ್ದಾಗ ಕೇವಲ ಪದಕಗಳನ್ನು ತರುವುದಷ್ಟೇ ಅಲ್ಲ, ಹೆಣ್ಣುಮಕ್ಕಳಿಗೆ ಹೊಂಗನಸುಗಳನ್ನೂ ಹೊತ್ತು ತಂದಿರುತ್ತಾರೆ. ಗೆಲುವು ಸಾಧಿಸಿದವರು ಕನಸುಗಳ ಪ್ರಚಾರ ರಾಯಭಾರಿಗಳಾಗುತ್ತಾರೆ. ಅಷ್ಟೆ! ಸಾನಿಯಾ ಮತ್ತು ಸೈನಾ ಹೊರತು ಪಡಿಸಿದರೆ ಉಳಿದವರು ಯಾವುದೇ ಜಾಹೀರಾತು ಪ್ರಪಂಚದಲ್ಲಿ ಮಿಂಚಿಲ್ಲ. ಮೇರಿಕೋಮ್ ಒಂದೆರಡು ಕಡೆ ಮಿಂಚಿದರು ಅಷ್ಟೆ. ಜಾಹೀರಾತು ಪ್ರಪಂಚದಲ್ಲಿ ಮಹಿಳೆ ಈಗಲೂ ಮಾರಾಟದ ಸರಕಾಗಿದ್ದಾಳೆಯೇ ಹೊರತು ಪ್ರೇರಕ ಶಕ್ತಿಯಾಗಿ ಕಂಡಿಲ್ಲ. ಇದೇ ಕಾರಣದಿಂದಾಗಿಯೇ ಪ್ರಾಯೋಜಕರೂ ಕಡಿಮೆ. ಪರಿಣಾಮ, ಮಹಿಳಾ ಕ್ರೀಡಾಪಟುಗಳಿಗೆ ನೀಡುವ ಸಂಭಾವನೆ, ಸೌಲಭ್ಯಗಳಲ್ಲಿಯೂ ವ್ಯತ್ಯಾಸ ಕಂಡು ಬರುತ್ತದೆ. ಸಮಾನ ಅವಕಾಶ, ಸಮಾನ ವೇತನ ಎನ್ನುವುದು ಕೇವಲ ಔದ್ಯೋಗಿಕ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಬಾರದು. ಕ್ರೀಡಾಕ್ಷೇತ್ರದಲ್ಲಿ ಸೌಲಭ್ಯಗಳನ್ನೇ ನೀಡದೇ, ಮಹಿಳೆಯರೆಂಬ ಕಾರಣಕ್ಕೆ ಲೈಂಗಿಕ ಕಿರುಕುಳವನ್ನೂ ನೀಡುವ ವ್ಯವಸ್ಥೆ ನಮ್ಮಲ್ಲಿಯೇ ಇದೆ. ಧ್ವನಿ ಎತ್ತಿದವರ ಧ್ವನಿ ಉಡುಗಿಸುವುದೂ ವ್ಯವಸ್ಥೆಗೆ ಗೊತ್ತಿದೆ.

ನಮ್ಮ ಸಮಾಜದಲ್ಲಿ ಕ್ರೀಡಾಪಟುಗಳಲ್ಲಿ ಇರುವ ತರತಮ ನೀಗಿಸಿದಲ್ಲಿ, ನಿಗಿನಿಗಿ ಕೆಂಡದಂಥ ಕ್ರೀಡಾಳುಗಳು ಎದ್ದು ಬರುತ್ತಾರೆ. ಸಾಮಾಜಿಕ ನಿರ್ಬಂಧನೆಗಳನ್ನು ಬದಿಗಿರಿಸಿ ಪಾಲಕರು ಮಕ್ಕಳ ಯಶಸ್ಸಿಗಾಗಿ ಶ್ರಮಿಸಿದರೆ ಇನ್ನಷ್ಟು ಗೆಲುವಿನ ಪದಕಗಳು ಭಾರತಕ್ಕೆ ಒಲಿದು ಬರುತ್ತವೆ. ಸಣ್ಣ ಸಣ್ಣ ಪ್ರೋತ್ಸಾಹಗಳು, ಸವಾಲುಗಳು, ಸಮಸ್ಯೆಗಳನ್ನು ಮೆಟ್ಟಿನಿಲ್ಲುವ ಮನೋಸ್ಥೈರ್ಯದಿಂದಲೇ ಒಲಿಂಪಿಕ್ ಪದಕಪಟ್ಟಿಯಲ್ಲಿ ಮಹಿಳೆಯರು ಮಿಂಚಿದ್ದಾರೆ.

ನಮ್ಮ ದೇಶದಲ್ಲಿ ಸದ್ಯ ಹೆಣ್ಣುಮಕ್ಕಳು ಭ್ರೂಣಗಳಿಂದ ಮಗುವಾಗಿ ಬೆಳೆಯಲೂ ಹೋರಾಡಬೇಕಾದ ಸ್ಥಿತಿ ಇದೆ. ಗ್ರಾಮೀಣ ಭಾರತದಲ್ಲಿ ಈಗಲೂ ಹದಿಹರೆಯದ ಮಾತೆಯರಿದ್ದಾರೆ. ಮಾಧ್ಯಮದಲ್ಲಿಯೂ ಹೆಣ್ಣುಮಕ್ಕಳ ಬದುಕಿನ ಗಮ್ಯ ಮದುವೆ ಎಂದೇ ಬಿಂಬಿಸಲಾಗುತ್ತಿದೆ. ಸಿನಿಮಾ– ಧಾರಾವಾಹಿಗಳಂತೂ ಈ ವಿಷಯದಲ್ಲಿ ಮಹಿಳೆಯರನ್ನು ಉತ್ಪಾದನಾ ಸರಕಿನಂತೆಯೂ, ಪ್ರಚಾರದ ಸರಕಾಗಿಯೇ ಚಿತ್ರಿಸುತ್ತಾರೆ. ಅವನ್ನು ಹೊರತಾಗಿಯೂ ಸಾಧನೆ ಮಾಡಿದವರ ಸಂಕಟ, ಸವಾಲು, ಸಂಘರ್ಷಗಳನ್ನು ಜನರ ಎದುರಿಗಿಟ್ಟರೆ ಸಾಧನೆಯ ಹಾದಿಯ ಕಲ್ಲುಮುಳ್ಳು ತೆಗೆದಂತಾಗುವುದು. ಈ ಹೊಣೆಗಾರಿಕೆಯನ್ನು ಅರಿಯದೆಯೇ ಗೆದ್ದೆತ್ತಿನ ಬಾಲ ಹಿಡಿದಂತೆ ಗೆಲುವನ್ನು ಮಾತ್ರ ಸಂಭ್ರಮಿಸಿದರೆ ಅದು ಗೆಲುವಿನ ಬಿರುಸು ಬಾಣಗಳಂತೆಯೇ ಸುಟ್ಟು ಭಸ್ಮವಾಗುವ ಸಂಭ್ರಮವಾಗುತ್ತದೆ. ಗೆಲುವಿನ ದೀಪದ ಕುಡಿಯೊಂದು ಹೊತ್ತಿಸಬೇಕು. ಮತ್ತು ಅದು ಸುದೀರ್ಘಕಾಲ ಬೆಳಕು ನೀಡುವಂತಾಗಬೇಕು.

ಉತ್ತಮ ಮೂಲಸೌಲಭ್ಯಗಳನ್ನು ನೀಡಿ, ಅಗತ್ಯದ ಬೆಂಬಲ ನೀಡಿ, ಪ್ರೋತ್ಸಾಹಿಸಿದರೆ ಕ್ರೀಡಾಕ್ಷೇತ್ರದಲ್ಲಿ ಮಹಿಳೆಯರು ಮೇಲುಗೈ ಸಾಧಿಸುತ್ತಾರೆ. ಹಿಂದೆ ಸಾನಿಯಾ ಸೋಲು ಕಂಡಾಗ ಅವರ ವೈಯಕ್ತಿಕ ಬದುಕನ್ನು ಸಾಮಾಜಿಕ ಜಾಲತಾಣಗಳಲ್ಲಿ ಜಾಲಾಡಿದ್ದರು. ಒಂದು ಸೋಲನ್ನು ಸ್ವೀಕರಿಸಲಾಗದ ಸಮಾಜ, ಕ್ರೀಡಾಳುವನ್ನು ಕ್ರೀಡಾಳುವಾಗಿ ನೋಡದೆ ಹೆಣ್ಣೆಂದು ಹೀಗಳೆಯುವ ಸಮಾಜ, ಗೆದ್ದಾಗ ಹಿಗ್ಗಿದರಷ್ಟೇ ಸಾಲದು, ಇನ್ನಷ್ಟು ಗೆಲುವನ್ನು ಸಲೀಸಾಗಿಸುವ ಹೊಣೆ ಹೊರಬೇಕು. ಗೆದ್ದಮೇಲೆ ಹಣ ನೀಡಿ ಪ್ರೋತ್ಸಾಹಿಸುವಂತೆಯೇ ಪಾಲ್ಗೊಳ್ಳುವಾಗಲೂ, ಆಟವಾಡಲೂ ಮೂಲಸೌಲಭ್ಯ ಮತ್ತು ಅಗತ್ಯದ ಸೌಲಭ್ಯಗಳನ್ನು ಒದಗಿಸಿದರೆ ವಿಜಯದ ನಗೆಯಲ್ಲಿ ಸಮಾಜದ ಕುರಿತು ಹೆಮ್ಮೆಯೂ, ಧನ್ಯವಾದಗಳೂ ಪ್ರತಿಬಿಂಬಿಸುತ್ತವೆ.

■ ರಶ್ಮಿ ಎಸ್